...

310 (439) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮತ್ಸ್ಯ ಆಶ್ರಯ ಯೋಜನೆಯಲ್ಲಿ ಮನೆ ಮಂಜೂರಾತಿ ಕೋರಿ ಉಡುಪಿ ಜಿಲ್ಲೆಯಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; (ವಿಧಾನಸಭಾವಾರು ವಿವರ ನೀಡುವುದು)

ಆ) ಕಳೆದ ಹಲವಾರು ವರ್ಷಗಳಿಂದ ಮನೆ ಮಂಜೂರಾತಿ ಕೋರಿ ನಿರೀಕ್ಷೆಯಲ್ಲಿರುವ ಮೀನುಗಾರರಿಗೆ ಪ್ರಸಕ್ತ ವರ್ಷದಲ್ಲಿ ಮನೆ ಮಂಜೂರು ಮಾಡಲಾಗುವುದೇ;

ಇ) ಮೀನುಗಾರಿಕಾ ಮನೆಗಳನ್ನು ನಿರ್ಮಿಸುವ ಮೊತ್ತವನ್ನು ಈಗಿರುವ ರೂಪಾಯಿ 30,000.00 ರಿಂದ 50,000.00ಕ್ಕೆ ಹೆಚ್ಚಿಸಲಾಗುವುದೇ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಮತ್ಸ್ಯ ಆಶ್ರಯ ಯೋಜನೆಯಲ್ಲಿ ಮನೆ ಮಂಜೂರಾತಿ ಕೋರಿ ಉಡುಪಿ ಜಿಲ್ಲೆಯಿಂದ 3541 ಅರ್ಜಿಗಳು ಬಂದಿರುತ್ತವೆ. ವಿಧಾನಸಭಾವಾರು ವಿವರಗಳು ಕೆಳಗಿನಂತಿರುತ್ತದೆ.

1.	ಕಾಪು	318 ಅರ್ಜಿಗಳು.
2.	ಉಡುಪಿ	343 ಅರ್ಜಿಗಳು.
3.	ಬ್ರಹ್ಮಾವರ	913 ಅರ್ಜಿಗಳು.
4.	ಕುಂದಾಪುರ	910 ಅರ್ಜಿಗಳು.
5.	ಬೈಂದೂರು	977 ಅರ್ಜಿಗಳು.
6.	ಕಾರ್ಕಳ	80 ಅರ್ಜಿಗಳು.

ಆ) ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಯಾವುದೇ ಮನೆಗಳನ್ನು ಮಂಜೂರು ಮಾಡುವ ಯೋಜನೆ ಸರ್ಕಾರದ ಮುಂದಿರುವುದಿಲ್ಲ.

ಇ) ಮನೆ ನಿರ್ಮಾಣ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

...

311 (649) : ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊಸನಗರ ತಾಲ್ಲೂಕಿಲ್ಲಿ ಕಳೆದ ಮೂರು ವರ್ಷಗಳಿಂದ ವಿವಿಧ ಇಲಾಖೆಗಳಿಂದ ನಿರ್ವಹಿಸಿದ ಕುಡಿಯುವ ನೀರಿನ ತೆರೆದ ಬಾವಿ ಮತ್ತು ಕೊಳವೆ ಬಾವಿಗಳ ಸಂಖ್ಯೆ;

ಆ) ಇಲಾಖಾವಾರು, ಗ್ರಾಮ / ತಾಲ್ಲೂಕು / ಜಿಲ್ಲಾ / ಇತರೆ ಅನುದಾನಗಳಿಂದ ತಾಲ್ಲೂಕಿನ ಎಲ್ಲೆಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ ಎಂಬ ವಿವರ ಒದಗಿಸುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹೊಸನಗರ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ಕುಡಿಯುವ ನೀರಿನ ಸಲುವಾಗಿ ವಿವಿಧ ಯೋಜನೆ / ಇಲಾಖೆಗಳ ಮೂಲಕ ಅನುಷ್ಠಾನಗೊಳಿಸಲಾದ ತೆರೆದ ಮತ್ತು ಚಿಲುಮೆ ಬಾವಿ / ಕೊಳವೆ ಬಾವಿಗಳ ಸಂಖ್ಯೆ ಕ್ರಮವಾಗಿ 1156 ಮತ್ತು 42 ಇರುತ್ತದೆ.

ಆ) 3 ವರ್ಷಗಳ ಸತತ ಬರದ ಸನ್ನಿವೇಶದಲ್ಲಿ ಹೊಸನಗರ ತಾಲ್ಲೂಕಿನ ಜನವಸತಿಗಳ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಅವಶ್ಯಕತೆಯನುಸಾರ ಭೂವಿಜ್ಞಾನಿಗಳ ಸಲಹೆ ಪಡೆದು ತೆರೆದ ಬಾವಿ ಮತ್ತು ಕೊಳವೆ ಬಾವಿಗಳ ಕಾರ್ಯಕ್ರಮವನ್ನು ರೂ. 42.10 ಲಕ್ಷ ಅನುದಾನ ಬಳಸಿ ಅನುಷ್ಠಾನಗೊಳಿಸಲಾಗಿದೆ.

...

313 (652) : ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊಸನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಳೆದ ಒಂದು ವರ್ಷದಿಂದ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಯು ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಇದುವರೆಗೂ ಅದನ್ನು ಭರ್ತಿ ಮಾಡದಿರಲು ಕಾರಣವೇನು;

ಇ) ಅದನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹೌದು.

ಆ) ಸರ್ಕಾರದ ಆದೇಶ ಸಂಖ್ಯೆ: ಆಕುಕ 122 ಹೆಚ್‌ಎಸ್‌ಹೆಚ್ 2004 ದಿನಾಂಕ: 24-6-2004ರಂದು ಮಹಿಳಾ ವೈದ್ಯರು ಮತ್ತು ಒಬ್ಬ ಪುರುಷ ವೈದ್ಯರನ್ನು ನೇಮಕ ಮಾಡಲಾಗಿದೆ.

ಇ) ಈ ಇಬ್ಬರೂ ವೈದ್ಯರು ದಿನಾಂಕ: 13-7-2004 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

...

314 (421) : ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿರುವ ಒಳಚರಂಡಿಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಒಳಚರಂಡಿಯ ಕೊಳವೆಗಳನ್ನು ಸಂಪೂರ್ಣವಾಗಿ ಬದಲಾಯಿಸುವ ಸಮಗ್ರ ಯೋಜನೆ ಸರ್ಕಾರದ ಮುಂದಿದೆಯೇ;

ಇ) ಈ ಯೋಜನೆಯ ನೀಲನಕ್ಷೆ ಸಿದ್ಧವಾಗಿದೆಯೇ;

ಈ) ಸದರಿ ಯೋಜನೆಗೆ ತಗಲುವ ಅಂದಾಜು ವೆಚ್ಚ ಎಷ್ಟು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಯವರು)

ಅ) ಬಂದಿದೆ.

ಆ) ಒಳಚರಂಡಿಯ ಕೊಳವೆಗಳನ್ನು ಸಂಪೂರ್ಣವಾಗಿ ಬದಲಾಯಿಸುವ ಬಗ್ಗೆ ಮಂಡಳಿಯು ಈಗಾಗಲೇ ಕಾರ್ಯ ಸಾಧ್ಯ ವರದಿ ತಯಾರಿಸಿ ಸರ್ವೆ ಕಾರ್ಯ ಕೈಗೊಂಡು ಮಾಸ್ಟರ್ ಪ್ಲಾನ್ ತಯಾರಿಸಲು ಕ್ರಮ ಕೈಗೊಂಡಿದೆ.

ಇ) ಸರ್ವೆ ಕಾರ್ಯ ಪೂರ್ಣಗೊಂಡ ಬಳಿಕ ನೀಲನಕ್ಷೆಯನ್ನು ಡಿಸೆಂಬರ್ 2004ರೊಳಗಾಗಿ ತಯಾರಿಸಲಾಗುವುದು.